192 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
ಜೆ.ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಅ) ಸರ್ಕಾರವು ರೈತರು ಕೊಡುತ್ತಿರುವ ಪಹಣಿಗಳ ಬೆಲೆಯನ್ನು ಎಷ್ಟಕ್ಕೆ ನಿಗದಿಪಡಿಸಲಾಗಿದೆ.

ಪಹಣಿಗೆ ರೂ.15/– ಬೆಲೆ ನಿಗದಿಪಡಿಸಲಾಗಿದೆ

ಆ) ನಿಗದಿಪಡಿಸಿದ್ದಲ್ಲಿ, ರೈತರ ಹಿತಕಾಯುವ ದೃಷ್ಟಿಯಿಂದ ಬೆಲೆಯನ್ನು ಕಡಿಮೆ ಮಾಡುವ ಚಿಂತನೆ ಸರ್ಕಾರದ ಮುಂದಿದೆಯೇ?

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಇ) ಹಾಗಿದ್ದಲ್ಲಿ, ಬೆಲೆ ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ

<u>ಕರ್ನಾಟಕ ವಿಧಾನ ಸಭೆ</u>

193 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)

ಅ) ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತುರವನೂರು ಹೋಬಳಿಗೆ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಯ ಒಟ್ಟಾರೆ 2,54,023 ಎಕರೆ ಪ್ರದೇಶಗಳು ನೀರಾವರಿಯಾಗಲಿದ್ದು, ಇದರಲ್ಲಿ ತುರುವನೂರು ಹೋಬಳಿಯ ಕೆಲವು ಗ್ರಾಮಗಳ ಜಮೀನುಗಳು ಸೇರಿರುತ್ತವೆ.

ಆ) ಈ ಕಾಮಗಾರಿಯು ಈಗ ಯಾವ ಹಂತದಲ್ಲಿದೆ; ಕಾಮಗಾರಿಯು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಭದ್ರಾ ಮೇಲ್ದಂಡೆ ಯೋಜನೆಯು ಪ್ರಾರಂಭಿಕ ಹಂತದಲ್ಲಿದ್ದು, ಪ್ರಾರಂಭದ ಮೂರು ಪ್ಯಾಕೇಜ್‌ಗಳ ಗುತ್ತಿಗೆಯನ್ನು ನೀಡಲಾಗಿದೆ. ಇದರಲ್ಲಿ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 15 ಟಿ.ಎಂ.ಸಿ. ನೀರೆತ್ತುವ (ಪ್ಯಾಕೇಜ್ –1), ಭದ್ರಾ ಜಲಾಶಯದಿಂದಅಜ್ಜಂಪುರ ಸುರಂಗದವರೆಗೆ 21.50 ಟಿ.ಎಂ.ಸಿ. ನೀರೆತ್ತುವ (ಪ್ಯಾಕೇಜ್ –2) ಮತ್ತು 6.9 ಕಿ.ಮೀ. ಉದ್ದದ ಸುರಂಗ ಕಾಮಗಾರಿಗಳು (ಪ್ಯಾಕೇಜ್ –3) ಇರುತ್ತವೆ. ಈ ಮೂರು ಪ್ಯಾಕೇಜ್‌ಗಳ ಡಿ.ಪಿ.ಆರ್.ಗಳನ್ನು ಗುತ್ತಿಗೆದಾರರು ಸಲ್ಲಿಸಿದ್ದು, ಇವುಗಳಿಗೆ ಅನುಮೋದನೆ ನೀಡುವ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ. ಸುರಂಗದ ನಂತರದ ಚಿತ್ರದುರ್ಗ ಶಾಖಾ ಕಾಲುವೆಯ ಪ್ಯಾಕೇಜ್‌ವಾರು ಅಂದಾಜು ಪಟ್ಟಿಗಳ ತಯಾರಿಕಾ ಕಾರ್ಯವು ಪ್ರಗತಿಯಲ್ಲಿದ್ದು, ಮೊದಲ ಎರಡು ಪ್ಯಾಕೇಜ್‌ಗಳ ಅಂದಾಜುಗಳನ್ನು ಈಗಾಗಲೇ ತಯಾರಿಸಲಾಗಿದೆ.